# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/2043/2021/ಎಆರ್ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:30-09-2022
01-10.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: ಶ್ರೀ ಭೀಮನಾಯ್ಕ್, ವಿಶೇಷ ಭೂಸ್ವಾಧೀನಾಧಿಕಾರಿ, ಪೋಡಿಯಂ ಬ್ಲಾಕ್, ವಿವಿ ಟವರ್, ಬೆಂಗಳೂರು (ಎದುರುದಾರರು) ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಹನುಮಂತರಾಯಪ್ಪ ಬಿನ್ ಚೌಡಯ್ಯ, ಬಸವನಹಳ್ಳಿ ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ ಶ್ರೀ ಭೀಮನಾಯ್ಕ್, ವಿಶೇಷ ಭೂಸ್ವಾಧೀನಾಧಿಕಾರಿ, ಪೋಡಿಯಂ ಬ್ಲಾಕ್, ವಿವಿ ಟವರ್, ಬೆಂಗಳೂರು (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರಾದ ಹನುಮಂತರಾಯಪ್ಪ ಇವರು ದೂರಿನಲ್ಲಿ ಬಸವನಹಳ್ಳಿ ಗ್ರಾಮದ ಸರ್ವೆ ನಂ.76/2ರಲ್ಲಿ 1 ಎಕರೆ ಜಮೀನು ರೈಲ್ವೆ ಇಲಾಖೆಗಾಗಿ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿಯಲ್ಲಿ ಭೂಸ್ವಾಧೀನಪಡಿಸಿಕೊಂಡಿದ್ದು ನಿಗಧಿಪಡಿಸಲಾದ ಪರಿಹಾರದ ಹಣವನ್ನು ಸದರಿಯವರ ಮತ್ತು ಸದರಿಯವರ ತಂದೆಯ ಉಳಿದ ವಾರಸುದಾರರ ಸಹಿಗಳನ್ನು ಪಡೆದುಕೊಳ್ಳದೇ ಪರಿಹಾರವನ್ನು ವಿತರಿಸದಂತೆ ಎದುರುದಾರರಿಗೆ ತಕರಾರು ಅರ್ಜಿ ನೀಡಿದ್ದರೂ ಸಹ ಸದರಿ ತಕರಾರನ್ನು ಎದುರುದಾರರು ಪರಿಗಣಿಸದೇ ಸದರಿಯವರ ಸಹೋದರರನಾದ ನಾರಾಯಣ ಇವರಿಗೆ ರೂ.1-00 ಕೋಟಿಗೂ ಹೆಚ್ಚು ಪರಿಹಾರ ಹಣವನ್ನು ನೀಡಿ ನಾರಾಯಣ ಇವರಿಂದ ಸುಮಾರು ರೂ.40-00 ಲಕ್ಷ ಹಣವನ್ನು ಲಂಚವನ್ನಾಗಿ ಪಡೆದುಕೊಂಡು, ನಾರಾಯಣ ಇವರಿಗೆ ನೀಡಿರುವ ಪರಿಹಾರ ಹಣವನ್ನು ವಾಪಸ್ಸು ಪಡೆದುಕೊಂಡು ಸದರಿಯವರಿಗೆ ಮತ್ತು ಸದರಿಯವರ ಎಲ್ಲಾ ಸಹೋದರರಿಗೆ ಸಮನಾಗಿ ಹಂಚುವಂತೆ ಅರ್ಜಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಮತ್ತು ಭೂಸ್ವಾಧೀನ ಪ್ರಕರಣದ ಲಿಖಿತ ವಾದದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆ:

ದಿನಾಂಕ:27-09-2021ರ ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ;31-08-2017ರಂದು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು, ನೆಲಮಂಗಲ ಇವರು ಎಲ್.ಎ.ಸಿ. ಸಂಖ್ಯೆ.104/2009ರಲ್ಲಿ ತೀರ್ಪು ನೀಡಿದ್ದು ಸದರಿ ತೀರ್ಪಿನಲ್ಲಿ The market value of the acquired land in this LAC case is fixed at Rs.34,20,000/- per acre ಎಂದು ತಿಳಿಸಿದ್ದು ನ್ಯಾಯಾಲಯದ ತೀರ್ಪು ಹಾಗೂ ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ರೂ.1,57,27,581/--ಗಳನ್ನು ಠೇವಣಿ ಇಡುವಂತೆ ದಿನಾಂಕ:25-02-2020ರಂದು ಡೆಪ್ಯೂಟಿ ಚೀಫ್ ಇಂಜಿನಿಯರ್, ಸೌತ್ ವೆಸ್ಟ್ರನ್ ರೈಲ್ವೆ, ಬೆಂಗಳೂರು ಇವರಿಗೆ ಪತ್ರ ಬರೆದಿರುವುದಾಗಿ ಪತ್ರದ ಪ್ರತಿಯನ್ನು ಲಗತ್ತಿಸಿರುತ್ತಾರೆ. ದೂರುದಾರರೆ ಇ-ಸ್ಟಾಂಪ್‌ನಲ್ಲಿ ಪ್ರಮಾಣ ಪತ್ರವನ್ನು ನೋಟರಿ ಮಾಡಿಸಿ ಅದರಲ್ಲಿ ಬಸವನಹಳ್ಳಿ ಗ್ರಾಮದ ಸರ್ವೆ ನಂ.76/2ರಲ್ಲಿನ 0-27 ಗುಂಟೆ ಜಮೀನು ರೈಲ್ವೆ ಇಲಾಖೆಗೆ ಭೂಸ್ವಾಧೀನವಾಗಿದ್ದು, ಹಾಲಿ ನಮ್ಮ ತಂದೆಯವರು ಮರಣ ಹೊಂದಿದ್ದು ಇವರ ವಾರಸುದಾರರಾದ 1) ಹನುಮಂತರಾಯಪ್ಪ 2) ಬಿ.ಸಿ. ನಾರಾಯಣಪ್ಪ ಎಂಬ ನಾವು ಜಂಟಿ ವಾರಸುದಾರರಾಗಿದ್ದು ಭೂಸ್ವಾಧೀನದ ಮೊತ್ತವನ್ನು ಈಗಾಗಲೇ ಪಡೆದಿದ್ದು, ಹೆಚ್ಚಿನ ಪರಿಹಾರದ ಭೂಸ್ವಾಧೀನದ ಮೊತ್ತವನ್ನು ನನ್ನ ಸಹೋದರನಾದ ಶ್ರೀ ನಾರಾಯಣಪ್ಪ ಬಿನ್ ಲೇಟ್ ಚೌಡಯ್ಯ ರವರ ಹೆಸರಿಗೆ ನೀಡುವಲ್ಲಿ ನನ್ನ ಯಾವುದೇ ತಂಟೆ ತಕರಾರು/ಆಕ್ಷೇಪಣೆಗಳು ಇರುವುದಿಲ್ಲವೆಂದು ಹನುಮಂತರಾಯಪ್ಪ ಬಿನ್ ಲೇಟ್ ಚೌಡಯ್ಯ ಇವರು ಪ್ರಮಾಣೀಕರಿಸಿ ದಿನಾಂಕ:23-09-2020ರಂದು ಪ್ರಮಾಣಪತ್ರವನ್ನು ಕಛೇರಿಗೆ ಸಲ್ಲಿಸಿರುವುದಾಗಿ ನಮೂದಿಸಿರುತ್ತಾರೆ. ಹನುಮಂತರಾಯಪ್ಪ ಬಿನ್ ಲೇಟ್ ಚೌಡಯ್ಯ ರವರು ತಂಟೆ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಿದ್ದಲ್ಲಿ ಅದಕ್ಕೆ ಪೂರ್ಣ ಹೊಣೆಯನ್ನು ಶ್ರೀ ನಾರಾಯಣಪ್ಪ ಬಿನ್ ಲೇಟ್ ಚೌಡಯ್ಯ ಆದ ನಾನು ಭರಿಸಲು ಬದ್ದನಾಗಿರುತ್ತೇನೆ ಎಂದು ಪ್ರಮಾಣ ಪತ್ರದಲ್ಲಿ ಬರೆದಿರುವುದಾಗಿ ತಿಳಿಸಿರುತ್ತಾರೆ. ಒಟ್ಟು ಪರಿಹಾರದ ಹಣ ರೂ.1,57,27,281/- ಇದರಲ್ಲಿ ರೈಲ್ವೆ ಇಲಾಖೆಗೆ ಸಂಬಂಧಿಸಿದ ಲಭ್ಯವಿದ್ದ ಅನುದಾನದ ಪೈಕಿ ರೂ.75-00 ಲಕ್ಷಗಳನ್ನು ನೇರವಾಗಿ ಶ್ರೀ ನಾರಾಯಣ ಬಿ.ಸಿ. ಇವರ ಖಾತೆಗೆ ದಿನಾಂಕ:05-09-2020ರಂದು ಮತ್ತು ದಿನಾಂಕ:19-11-2020ರಂದು ರೂ.25-00 ಲಕ್ಷಗಳನ್ನು ನೆಫ್ಟ್ ಮುಖಾಂತರ ಸದರಿಯವರಿಗೆ ಜಮಾ ಮಾಡುವಂತೆ ಖಜಾನೆ ಇಲಾಖೆಗೆ ಲಿಖಿತವಾಗಿ ತಿಳಿಸಿದ್ದು ಅದರಂತೆ ಪಾವತಿಯಾಗಿದ್ದು ಸ್ವೀಕೃತಿ ನೀಡಿರುವುದಾಗಿ ನಮೂದಿಸಿರುತ್ತಾರೆ. ಹನುಮಂತರಾಯಪ್ಪ ಇವರ ಮಗಳು ರೂಪ.ಹೆಚ್., ಮುನಿಲಕ್ಕಮ್ಮ, ಹನುಮಂತರಾಯಪ್ಪ, ಚೌಡಮ್ಮ ಮತ್ತು ಲಕ್ಷ್ಮಮ್ಮ ಇವರುಗಳು ಜಂಟಿಯಾಗಿ ದಿನಾಂಕ:20-03-2021ರಂದು ಪರಿಹಾರದ ಬಾಬ್ತು ವಿಚಾರವಾಗಿ ತಕರಾರು ಅರ್ಜಿ ಸಲ್ಲಿಸಿದ್ದು ಸದರಿ ತಕರಾರಿಗೆ ದಿನಾಂಕ:09-08-2021ರಂದು ವಿಚಾರಣೆಗೆ ಹಾಜರಾಗುವಂತೆ ದಿನಾಂಕ:04-08-2021ರಂದು ತಿಳುವಳಿಕೆ ಪತ್ರ ನೀಡಿದ್ದರೂ ಸದರಿ ದಿನಾಂಕದಂದು ಹಾಜರಾಗಿರುವುದಿಲ್ಲವೆಂದು ಈ ಸಂಬಂಧ ದಿನಾಂಕ:29-09-2021ರಂದು ವಿಚಾರಣೆಗೆ ಹಾಜರಾಗುವಂತೆ

110

ದಿನಾಂಕ:15-09-2021ರಂದು ತಿಳುವಳಿಕೆ ಪತ್ರವನ್ನು ಜಾರಿ ಮಾಡಿರುವುದಾಗಿ ತಿಳಿಸಿರುತ್ತಾರೆ. ದೂರುದಾರರು ಆಪಾದಿಸಿದಂತೆ ನಾರಾಯಣ ಇವರ ಜೊತೆ ಶಾಮೀಲಾಗಿರುವುದಿಲ್ಲ ಹಾಗೂ ಲಂಚವನ್ನು ಪಡೆದಿರುವುದಿಲ್ಲವೆಂದು ದಾಖಲಾತಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡಿರುವುದಾಗಿ ತಿಳಿಸಿರುತ್ತಾರೆ. ಹೆಚ್ಚಿನ ಪರಿಹಾರದ ಆದೇಶದ ನಕಲನ್ನು ಸಹ ರೈಲ್ವೆ ಇಲಾಖೆಗೆ ಕಳುಹಿಸಿರುವುದರಿಂದ ದೂರುದಾರರು ಮಾಡಿರುವ ಆರೋಪವು ನಿರಾಧಾರವಾಗಿದ್ದು ದಿನಾಂಕ:25-02-2020ರಂದು ಪತ್ರ ಮತ್ತು ದಿನಾಂಕ:30-06-2021ರಂದು ನೆನಪೋಲೆ ಬರೆಯಲಾಗಿದೆ ಎಂದು ತಿಳಿಸಿ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

**4. ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರ**

ದೂರುದಾರರು ದಿನಾಂಕ:27-12-2021ರಂದು ಪ್ರತ್ಯುತ್ತರ ಸಲ್ಲಿಸಿರುತ್ತಾರೆ. ದಿನಾಂಕ:13-08-2020ರಂದು ಭೂಸ್ವಾಧೀನ ಅದಿಕಾರಿಗಳ ಮುಂದೆ ಯಾವುದೇ ಪ್ರಮಾಣಪತ್ರವನ್ನು ಕೊಟ್ಟಿರುವುದಿಲ್ಲ, ಹಣ ಬಿಡುಗುಡೆ ಮಾಡಿರುವುದೇ ಕಾನೂನಿಗೆ ವಿರುದ್ಧವಾಗಿರುತ್ತದೆ ಎಂದು ಭೂಸ್ವಾಧೀನ ಅಧಿಕಾರಿಗಳ ಸಹಿ ಇರುವುದಿಲ್ಲವೆಂದು ಈ ದಾಖಲೆಯನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ರೂ.25-00 ಲಕ್ಷಗಳನ್ನು ಯಾವ ದಿನ ಬಿಡುಗಡೆ ಮಾಡಿದ್ದಾರೆ ಎಂಬುದಕ್ಕೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ನಮೂದಿಸಿರುತ್ತಾರೆ. ಇ-ಸ್ಟಾಂಪ್ ಪೇಪರನ್ನು ದಿನಾಂಕ:24-09-2020ರಂದು ಮಧ್ಯಾಹ್ನ 3-12 ಗಂಟೆಗೆ ತಿಗಳರ ಪತ್ತಿನ ಸಹಕಾರ ಸಂಘದಿಂದ ಪಡೆದಿದ್ದು ನೋಟರಿಯವರ ಮುಂದೆ ದಿನಾಂಕ:23-09-2020ರಂದು ನೋಟರಿ ಮಾಡಿಸಿರುತ್ತಾರೆಂದು ತಿಳಿಸಿರುತ್ತಾರೆ. ನೋಟರಿ ಚಂದ್ರಶೇಖರಯ್ಯ ಇವರನ್ನು ಕರೆಸಿ ವಿಚಾರಣೆಗೆ ಒಳಪಡಿಸಬೇಕೆಂದು ಕೋರಿರುತ್ತಾರೆ. ಪ್ರಮಾಣಪತ್ರ 1ನೇ ಮತ್ತು 2ನೇ ಪತ್ರದಲ್ಲಿರುವ ನಕಲಿ ಗುರುತುಗಳು ದೂರುದಾರರದಲ್ಲವೆಂದು ಮತ್ತು ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್‌ಗೆ ಕಳುಹಿಸಿ ತಪ್ಪು ಮಾಡಿದ ವ್ಯಕ್ತಿಗಳಿಗೆ ಕಾನೂನು ರೀತಿ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ.

**7. ಒಟ್ಟಾರೆ ಅಭಿಪ್ರಾಯ:**

ದೂರುದಾರರ ದೂರು ಅರ್ಜಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ದಾಖಲಾತಿ ಹಾಗೂ ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರಗಳಿಂದ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1) ಎದುರುದಾರರು ತಮ್ಮ ಆಕ್ಷೇಪಣೆಯ ಪುಟ ಸಂಖ್ಯೆ.3ರಲ್ಲಿ ದೂರುದಾರರೇ ದಿನಾಂಕ:12-11-2020ರಂದು ರೂ.100/-ಗಳ ಇ-ಸ್ಟಾಂಪ್‌ನಲ್ಲಿ ಪ್ರಮಾಣಪತ್ರವನ್ನು ನೋಟರಿ ಮಾಡಿಸಿ ಸಲ್ಲಿಸಿರುತ್ತಾರೆಂದು ಸದರಿ ಪ್ರಮಾಣಪತ್ರದ ಪ್ರತಿಯನ್ನು ಅನುಬಂಧ-4 ಎಂದು ಗುರುತಿಸಿ ಸಲ್ಲಿಸಿರುತ್ತಾರೆ. ಅನುಬಂಧ-4 ಅನ್ನು ಪರಿಶೀಲಿಸಿದಾಗ ಸದರಿ ಪ್ರಮಾಣಪತ್ರವನ್ನು ದೂರುದಾರರಾದ ಹನುಮಂತರಾಯಪ್ಪ ಇವರು ನೋಟರಿ

ಮಾಡಿಸಿ ಸಲ್ಲಿಸಿರುವುದಿಲ್ಲ. ಬದಲಿಗೆ ಬಿ.ಸಿ. ನಾರಾಯಣಪ್ಪ ಇವರು ನೋಟರಿ ಮಾಡಿ ಸಲ್ಲಿಸಿರುತ್ತಾರೆ. ದಿನಾಂಕ:12-11-2020ರ ನೋಟರಿ ಪ್ರಮಾಣಪತ್ರದಲ್ಲಿ ದೂರುದಾರರು ಸಹಿ ಮಾಡಿರುತ್ತಾರೆಂದು ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ.

2) ಎದುರುದಾರರು ಆಕ್ಷೇಪಣೆಯ ಪುಟ ಸಂಖ್ಯೆ.4ರಲ್ಲಿ ದಿನಾಂಕ:23-09-2020ರಂದು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿಯೂ ಸಹ ಶ್ರೀ ನಾರಾಯಣಪ್ಪ ಬಿನ್ ಲೇಟ್ ಚೌಡಯ್ಯ ಇವರ ಹೆಸರಿಗೆ ನೀಡುವುದರಲ್ಲಿ ಯಾವುದೇ ರೀತಿಯ ತಂಟೆ ತಕರಾರು/ಆಕ್ಷೇಪಣೆ ಇರುವುದಿಲ್ಲವೆಂದು ಪ್ರಮಾಣ ಪತ್ರ ಸಲ್ಲಿಸಿರುವುದಾಗಿ ಕ್ರಮವಾಗಿ ದಿನಾಂಕ:12-11-2020ರ ನೋಟರಿ ಪ್ರಮಾಣ ಪತ್ರ ಮತ್ತು ದಿನಾಂಕ:23-09-2020ರ ನೋಟರಿ ಪ್ರಮಾಣ ಪತ್ರಗಳನ್ನು ಅನುಬಂಧ-4 ಮತ್ತು 5 ಎಂದು ತಪ್ಪು ದಾಖಲೆಗಳ ಮಾಹಿತಿ ನೀಡಿರುತ್ತಾರೆ. ಅನುಬಂಧ-4 ಮತ್ತು 5 ಇವುಗಳಲ್ಲಿ ಬಿ.ಸಿ. ನಾರಾಯಣಪ್ಪ ಇವರ ಸಹಿಗಳು ಇರುತ್ತವೆ.

3) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಇ-ಸ್ಟಾಂಪ್ ಪೇಪರನ್ನು ದಿನಾಂಕ:24-09-2020ರಂದು ಮಧ್ಯಾಹ್ನ 3-12 ಗಂಟೆಗೆ ತಿಗಳರ ಪತ್ತಿನ ಸಹಕಾರ ಸಂಘದಿಂದ ಪಡೆದಿದ್ದು ನೋಟರಿಯವರ ಮುಂದೆ ದಿನಾಂಕ:23-09-2020ರಂದು ನೋಟರಿ ಮಾಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಈ ಅಂಶವನ್ನು ಎದುರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ನೋಟರಿ ಪ್ರಮಾಣಪತ್ರವನ್ನು ಅನುಬಂಧ-3 ಎಂದು ನಮೂದಿಸಿರುತ್ತಾರೆ. ಸದರಿ ಇ-ಸ್ಟಾಂಪ್ ಪೇಪರನ್ನು ದಿನಾಂಕ:24-09-2020ರಂದು ಖರೀದಿಸಿರುವುದು ಹಾಗೂ ದಿನಾಂಕ:23-09-2020ರಂದು ನೋಟರಿಯವರಿಂದ ಪ್ರಮಾಣೀಕರಿಸಿರುವುದು ಕಂಡುಬರುತ್ತದೆ. ಇ-ಸ್ಟಾಂಪ್ ಪೇಪರ್ ಪಡೆದ ದಿನದಂದು ಅಥವಾ ಮುಂದಿನ ದಿನಗಳನ್ನು ನಮೂದಿಸಿ ಪ್ರಮಾಣೀಕರಿಸಬಹುದಾಗಿರುತ್ತದೆ ಹೊರತು ಹಿಂದಿನ ದಿನಾಂಕವನ್ನು ನಮೂದಿಸಿ ಪ್ರಮಾಣೀಕರಿಸಲು ಅವಕಾಶವಿರುವುದಿಲ್ಲ. ಇಲ್ಲಿ ಎದುರುದಾರರು ಇ-ಸ್ಟಾಂಪ್ ಪೇಪರ್ ಖರೀದಿ ಮಾಡುವುದಕ್ಕಿಂತ ಮುಂಚಿನ ದಿನಾಂಕವನ್ನು ನಮೂದು ಮಾಡಿರುವುದನ್ನು ಖುದ್ದು ದೃಢೀಕರಿಸಿರುತ್ತಾರೆ.

4) ದಿನಾಂಕ:23-09-2020ರ ನೋಟರಿಯವರ ಪತ್ರದಲ್ಲಿ ದೂರುದಾರರ ಹೆಬ್ಬೆಟ್ಟಿನ ಗುರುತು ಇರುವುದು ಸ್ಪಷ್ಟವಾಗಿ ಕಂಡುಬರುವುದಿಲ್ಲ. ಏಕೆಂದರೆ ಎದುರುದಾರರು ದೃಢೀಕರಿಸಿರುವ ನಕಲು ಪ್ರತಿಯನ್ನು ಹಾಜರುಪಡಿಸಿರುವುದರಿಂದ ಯಾರ ಹೆಬ್ಬೆಟ್ಟಿನ ಗುರುತು ಇದೆ ಎಂಬುದನ್ನು ಪತ್ತೆ ಹಚ್ಚಲು ಬರುವುದಿಲ್ಲ.

ದೂರುದಾರರು ನೋಟರಿಯವರಿಂದ ಪ್ರಮಾಣೀಕೃತ ಪತ್ರವನ್ನು ಹಾಜರುಪಡಿಸಿರುತ್ತಾರೆಂದು ಸದರಿ ಪತ್ರದಲ್ಲಿ ಹಿಂದಿನ ದಿನಾಂಕವನ್ನು ನಮೂದಿಸಿ ನೋಟರಿ ಮಾಡಿರುವುದು, ಬಿ.ಸಿ. ನಾರಾಯಣಪ್ಪ ಇವರು ಸಲ್ಲಿಸಿರುವ ನೋಟರಿ

ಪ್ರಮಾಣೀಕೃತ ಪತ್ರಗಳನ್ನು ಹನುಮಂತರಾಯಪ್ಪ ಇವರು ಹಾಜರುಪಡಿಸಿರುತ್ತಾರೆಂದು ಸುಳ್ಳು ಮಾಹಿತಿ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುವುದರಿಂದ, ದೂರುದಾರರಾದ ಹನುಮಂತರಾಯಪ್ಪ ಇವರು ತಮ್ಮ ಪ್ರತ್ಯುತ್ತರದಲ್ಲಿ ಸುಳ್ಳು ನೋಟರಿ ಮಾಡಿಸಿರುತ್ತಾರೆಂದು ಆಪಾದಿಸಿರುವ ಅಂಶವು ಸಾಬೀತಾಗಿರುತ್ತದೆ.

ಆದುದರಿಂದ, ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ ಎದುರುದಾರರಾದ ಶ್ರೀ ಭೀಮನಾಯ್ಕ್, ವಿಶೇಷ ಭೂಸ್ವಾಧೀನಾಧಿಕಾರಿ, ಪೋಡಿಯಂ ಬ್ಲಾಕ್, ವಿವಿ ಟವರ್, ಬೆಂಗಳೂರು ಇವರು (ಎದುರುದಾರರಿಗೆ ಕರೆ ಮಾಡಿ ಪಡೆದುಕೊಂಡ ಮಾಹಿತಿಯ ಪ್ರಕಾರ ಸದರಿಯವರು ಹುಟ್ಟಿದ ದಿನಾಂಕ:15–07–1969 ಇದ್ದು ಸದರಿ ಹುಟ್ಟಿದ ದಿನಾಂಕದ ಆಧಾರದ ಮೇಲೆ ಸದರಿಯವರ ನಿವೃತ್ತಿ ದಿನಾಂಕವು 31–07–2029 ಆಗುತ್ತದೆ) ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು–2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/10/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.